C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 256/2019

**ಚಾ.ಸಾ.–04 ಪ್ರಾ.ಸಾ.–04**

| | |
|---|---|
| **ಸಾಕ್ಷಿದಾರರ ಹೆಸರು** | **ಜಯಮ್ಮ** |
| **ಗಂಡನ ಹೆಸರು** | **ಪುಟ್ಟಮಾದಯ್ಯ** |
| **ವಯಸ್ಸು** | **55 ವರ್ಷಗಳು** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ** | **ಗಾಂಧಿನಗರ, ಮಂಡ್ಯ ಸಿಟಿ** |

**ದಿನಾಂಕಃ 22.12.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ-1 ನನ್ನ ಗಂಡ. ಚಾಸಾ- 2 ನನ್ನ ಮಗ. ಚಾಸಾ- 3 ನನ್ನ ಮಗಳು. ಚಾಸಾ-5 ನನ್ನ ನಾದಿನಿ. ಚಾಸಾ- 6 ನನ್ನ ಅಕ್ಕ. ಚಾಸಾ- 7 ನನ್ನ ತಾಯಿ. ನಾವು ಪರಿಶಿಷ್ಟ ಜಾತಿಗೆ ಸೇರಿದವರು. ಚಾಸಾ- 10, 11 ರವರ ಪರಿಚಯ ನನಗೆ ಇದೆ.

2. ಈ ದಿನ ನ್ಯಾಯಾಲಯದ ಮುಂದಿರುವ 1, 3 ರಿಂದ 12 ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos. 1 and 3 to 12 in the dock). 2ನೇ ಆರೋಪಿಯ ಪರಿಚಯ ಕೂಡ ನನಗೆ ಇದೆ. (learned Counsel for Accused submits that there is no identity dispute with respect to accused No.2). 4 ಮತ್ತು 11 ನೇ ಆರೋಪಿತರು ಅವರು ಪರಿಶಿಷ್ಟ ಪಂಗಡಕ್ಕೆ ಸೇರಿದವರು. 7ನೇ ಆರೋಪಿ ವಿಶ್ವಕರ್ಮ ಜಾತಿಗೆ ಸೇರಿದವರು. ಉಳಿದವರು ಒಕ್ಕಲಿಗ ಜಾತಿಗೆ ಸೇರಿದವರು.

3. ನಾವು ಮಂಡ್ಯದ ಗಾಂಧಿನಗರ, 6ನೇ ಕ್ರಾಸ್‌ನಲ್ಲಿ ವಾಸವಿದ್ದೇವೆ. ನಾವು ಶೆಡ್ಡಿನಲ್ಲಿ ವಾಸವಿದ್ದೇವೆ. ನನಗೆ ಮದುವೆಯಾಗಿ 55 ವರ್ಷ ಆಗಿದೆ ಮದುವೆಯಾಗಿದ್ದಾಗಿನಿಂದ ಸದರಿ ಸ್ಥಳದಲ್ಲಿ ವಾಸವಾಗಿದ್ದೇನೆ. ನಾವು ವಾಸವಾಗಿರುವ ಜಾಗದಲ್ಲಿ ಎರಡು ಶೆಡ್ಡು ಇದ್ದವು. ಮುಂದಿನ ಶೆಡ್ಡಿನಲ್ಲಿ ನನ್ನ ಅತ್ತೆ ಮಾವ ನಾದಿನಿಯರು ವಾಸವಿದ್ದರು. ಹಿಂದೆ ಇರುವ ಶೆಡ್ಡಿನಲ್ಲಿ ನಾನು ನನ್ನ ಗಂಡ ಮತ್ತು ನನ್ನ 4 ಜನ ಮಕ್ಕಳು ವಾಸವಿದ್ದೆವು. ಹಿರಿಯ ಮಗಳನ್ನು ಮೈಸೂರಿಗೆ ಮದುವೆ ಮಾಡಿಸಿದ್ದೆವು 2ನೆ ಮಗಳನ್ನು ಮಂಡ್ಯದ ಹಾಲಹಳ್ಳಿಗೆ ಮದುವೆ ಮಾಡಿಸಿದ್ದೆವು. ಮದುವೆಯಾದ ನಂತರ ಅವರಿಬ್ಬರು ಗಂಡನ ಮನೆಯಲ್ಲಿ ವಾಸವಿದ್ದಾರೆ.

4. ಸರ್ಕಾರದಿಂದ ನನ್ನ ಅತ್ತೆ ಮಾವ ನಾದಿನಿಯರು ವಾಸವಿದ್ದ ಜಾಗದಲ್ಲಿ ಮನೆ ಕಟ್ಟಿಕೊಡುವಂತೆ ಅರ್ಜಿ ಹಾಕಿದ್ದೆವು. ಅದರಂತೆ ಮನೆ ಕಟ್ಟಿ ಕೊಡುತ್ತೇವೆ ಎಂದು ಹೇಳಿದ್ದರು. ಸದರಿ ಜಾಗದಲ್ಲಿ ಮುಂದೆ ಇದ್ದ ಶೆಡ್ಡನ್ನು ಕಿತ್ತು ಹಾಕಿ ಜಾಗ ಖಾಲಿ ಮಾಡಿಕೊಟ್ಟರೆ ಸರ್ಕಾರದಿಂದ ತಾರಸಿ ಮನೆ ಕಟ್ಟಿಕೊಡುತ್ತೇವೆ ಎಂದು ಸರ್ಕಾರದಿಂದ ಹೇಳಿದ್ದರು. 6 ವರ್ಷದ ಹಿಂದೆ ಸದರಿ ಶೆಡ್ಡನ್ನು ಕಿತ್ತುಹಾಕಿದೆವು. ಸ್ಥಳವನ್ನು ಅಚ್ಚುಕಟ್ಟು ಮಾಡಿದೆವು. ಆ ಸಮಯ 1ನೇ ಆರೋಪಿ 7– 8 ಜನರ ಜೊತೆಗೆ ಅಲ್ಲಿಗೆ ಬಂದು ಸದರಿ ಜಾಗ ತನ್ನದು ಎಂದು ಹೇಳಿದರು ಮತ್ತು ಗಲಾಟೆ ಮಾಡಿದರು. ನಂತರ ನಾವು ಅವರಿಗೆ ಹೊಡೆದೆವು ಎಂದು ಅವರು ಪೋಲೀಸರಿಗೆ ದೂರು ಕೊಟ್ಟರು. ಸರ್ಕಾರದಿಂದ ಮನೆ ಕಟ್ಟಿಕೊಡುತ್ತೇವೆ ಎಂದು ನಂತರ ಸರ್ಕಾರ ಮನೆ ಕಟ್ಟಿಕೊಡಲಿಲ್ಲ ಅದಕ್ಕೆ ಕಾರಣ ಆರೋಪಿತರು ಬಂದು ಗಲಾಟೆ ಮಾಡಿರುವುದು ಆಗಿರುತ್ತದೆ. ನಮಗೆ ಇರಲು ಜಾಗವಿರದೆ ಇದ್ದ ಕಾರಣ ಚಾಸಾ- 10 ರವರನ್ನು ಕರೆಸಿ ನಾವು ಸ್ವತಃ ಅಲ್ಲಿ ಮನೆ ಕಟ್ಟಲು ಶುರು ಮಾಡಿದೆವು. ವಾಸ್ತುಕಲ್ಲು ಕೂರಿಸಿ 6 ಅಡಿ ಎತ್ತರಕ್ಕೆ ಗೊಡೆ ಕಟ್ಟಿದ್ದೆವು. ನಾನು, ಚಾಸಾ- 1, 2, 3, 5 ರವರುಗಳು ಪೋಲೀಸ್ ಠಾಣೆಗೆ ಪೋಲೀಸರು ಕರೆದ ಮೇರೆಗೆ ಹೋಗಿದ್ದೆವು. ಆ ಸಮಯ ಚಾಸಾ- 10 ರವರು ಚಾಸಾ- 2 ರವರಿಗೆ ಪೋನ್ ಮಾಡಿ ಗೋಡೆಯನ್ನು ಯಾರೋ ಕಿತ್ತು ಹಾಕುತ್ತಿದ್ದಾರೆ ಎಂದು ಹೇಳಿದರು. ನಾವೆಲ್ಲರು ಮನೆಯ ಹತ್ತಿರ ಸ್ಕೂಟರ್ ಮತ್ತು ಆಟೋವಿನಲ್ಲಿ ಹೋದೆವು. ನಾವು ಕಟ್ಟುತ್ತಿದ್ದ ಹೊಸ ಮನೆಯ ಗೊಡೆಗಳನ್ನು ಕಿತ್ತು ಹಾಕಿದ್ದರು, ವಾಸ್ತುಕಲ್ಲನ್ನು ಹುರುಳಿಸಿದ್ದರು. ಗೇಟು ಬೀಗ ಹಾಕಿಕೊಂಡು 1ನೇ ಆರೋಪಿಯ ಕಡೆಯವರು ಚಾಸಾ- 6, 7 ರವರಿಗೂ ನನ್ನ

ಮಗಳಿಗೂ ಹೊಡೆಯುತ್ತಿದ್ದರು. ನಮ್ಮನ್ನು ಒಳಗೆ ಬಿಡುತ್ತಿರಲಿಲ್ಲ. ಚಾಸಾ- 7 ರವರನ್ನು ತಳ್ಳಿದರು. ಆಗ ಜನಗಳು ಎಲ್ಲಾ ಅಲ್ಲಿ ನೋಡುತ್ತಿದ್ದರು. ಪೋಲೀಸರು ಸ್ಥಳಕ್ಕೆ ಬಂದರು. ಗಲಾಟೆಯಲ್ಲಿ 4 – 5 ಜನಕ್ಕೆ ಏಟಾಗಿತ್ತು. ನನಗೆ, ಚಾಸಾ- 1, 3, 6 ಮತ್ತು 7ರವರಿಗೆ ಪೆಟ್ಟಾಗಿತ್ತು. ನನಗೆ 1ನೇ ಆರೋಪಿಯ ಕಡೆಯವರು ಹೊಡೆದರು. ನಾವೆಲ್ಲರೂ ಮಂಡ್ಯದ ಅಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆವು. ನಂತರ ನನ್ನ ಗಂಡ, ನಾನು ನನ್ನ ಮಗಳು ಹೋಗಿ ದೂರು ಕೊಟ್ಟೆವು. ಈ ಮೇಲೆ ಹೇಳಿದ ವಿಚಾರಗಳನ್ನು ಪೋಲೀಸರಿಗೆ ಹೇಳಿಕೆ ನೀಡುವಾಗ ಹೇಳಿರುತ್ತೇನೆ.

5. ಈ ಹಿಂದೆ ನಾನು ಮಂಡ್ಯದ ನ್ಯಾಯಾಲಯಕ್ಕೆ ಹೋಗಿ ಹೇಳಿಕೆ ನೀಡಿರುತ್ತೇನೆ ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–11** ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ**

6. ನಾವು ವಾಸವಿದ್ದ ಜಾಗವನ್ನು ನನ್ನ ಗಂಡ ಯಾರ ಬಳಿಯಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಜಾಗದ ಕ್ರಯಪತ್ರವಾಗಲೀ, ನಗರಸಭೆಯ ದಾಖಲೆಗಳಾಗಲೀ ನಾನು ನೋಡಿರುವುದಿಲ್ಲ. 1ನೇ ಆರೋಪಿ ಗಲಾಟೆ ನಡೆದಿದೆ ಎನ್ನುವ ಸ್ಥಳ ಅವರದು ಅದನ್ನು ಬಿಟ್ಟು ಕೊಡಬೇಕೆಂದು ಬಂದು ನಮ್ಮನ್ನು ಕೇಳಿದ್ದರು. ನಾವು ಸದರಿ ಜಾಗವನ್ನು ಬಿಟ್ಟುಕೊಟ್ಟಿರುವುದಿಲ್ಲ. ಈ ಸಂಬಂದ ಮಂಡ್ಯ ಪಶ್ಚಿಮ ಪೋಲೀಸ್ ಠಾಣೆಗೆ 1ನೇ ಆರೋಪಿ ದೂರನ್ನು ಕೊಟ್ಟಿರುತ್ತಾರೆ. ಆದಕಾರಣ ನಾನು ಮತ್ತು ನಮ್ಮ ಕುಟುಂಬದವರೆಲ್ಲರೂ ಪೋಲೀಸ್ ಠಾಣೆಗೆ ಹೋಗಿದ್ದೆವು. ಪೋಲೀಸರು ಸದರಿ ಸ್ಥಳ 1ನೇ ಆರೋಪಿಗೆ ಸಂಬಂದಪಟ್ಟಿದ್ದು ಅದನ್ನು ಅವರಿಗೆ ಬಿಟ್ಟುಕೊಡಿ ಎಂದು ನಮ್ಮಲ್ಲಿ ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳ ನಮ್ಮದು ಎಂದು ತೋರಿಸಲು ಪೋಲೀಸರಿಗೆ ನಾವು ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ನಾವು ಠಾಣೆಯಲ್ಲಿಇದ್ದ ಸಮಯ 1ನೇ ಆರೋಪಿ ಸದರಿ ಸ್ಥಳ ಅವರಿಗೆ ಸಂಬಂದಪಟ್ಟಿದ್ದು ಎಂದು ತೋರಿಸುವ ದಾಖಲೆಗಳನ್ನೆಲ್ಲಾ ತಂದು ಪೋಲೀಸರಿಗೆ ತೋರಿಸಿದರು. ಆ ಸಮಯ ಪೋಲೀಸರು ಸದರಿ ಸ್ಥಳ 1ನೇ ಆರೋಪಿಗೆ ಸೇರಿದ್ದು ಅದನ್ನು ಅವರಗೆ ಬಿಟ್ಟುಕೊಡಿ ಎಂದು ತಿಳುವಳಿಕೆ ಹೇಳಿದ್ದರು ಎಂದರೆ ಸರಿಯಲ್ಲ.

7. ಕೊಳಚೆ ನಿರ್ಮೂಲನ ಮಂಡಳಿಯವರಿಗೆ ಮನೆ ಕಟ್ಟಿಕೊಡಬೇಕೆಂದು ನಾವು ಅರ್ಜಿ ಕೊಟ್ಟಿದ್ದೆವು. ಅರ್ಜಿ ಕೊಟ್ಟ ನಂತರ ಕೃತ್ಯ ನಡೆದಿದೆ ಎನ್ನುವ ಸ್ಥಳದಲ್ಲಿ

ತಾತ್ಕಾಲಿಕವಾಗಿ ಶೆಡ್ಡನ್ನು ಕಟ್ಟಿ ವಾಸವಾಗಿದ್ದೆವು. ಸರ್ಕಾರದಿಂದ ಮನೆ ಕಟ್ಟಿಕೊಡುವವರಗೆ ಸದರಿಶೆಡ್ಡಿನಲ್ಲಿ ವಾಸವಿರುತ್ತೇವೆ ಎಂದು 1ನೇ ಆರೋಪಿಯನ್ನು ಕೇಳಿಕೊಂಡಿದ್ದೆವು ಎಂದರೆ ಸರಿಯಲ್ಲ.

**8.** ಕೊಳಚೆ ನಿರ್ಮೂಲನ ಮಂಡಳಿಯವರು ಕೃತ್ಯ ನಡೆದಿದೆ ಎನ್ನುವ ಸ್ಥಳದಲ್ಲಿ ನಮಗೆ ಯಾವುದೇ ಮನೆಯನ್ನು ಕಟ್ಟಿಕೊಡಲಿಲ್ಲ. ಸದರಿ ಸ್ಥಳ ನಮ್ಮದು ಎಂದು ತೋರಿಸುವ ದಾಖಲೆಗಳನ್ನು ನಾವು ಕೊಳಚೆ ನಿರ್ಮೂಲನ ಮಂಡಳಿಯವರಿಗೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ವಾಸ್ತು ಕಲ್ಲನ್ನುನಿಲ್ಲಿಸಿರುತ್ತೇನೆ ಎಂದು ಹೇಳುವ ಪೂರ್ವದಲ್ಲಿ ಅಲ್ಲಿ ಇದ್ದ ಶೆಡ್ಡನ್ನು ಕಿತ್ತು ಹಾಕಿರುತ್ತೇವೆ. ವಾಸ್ತು ಕಲ್ಲು ನಿಲ್ಲಿಸುವ ಸಮಯ 1ನೇ ಆರೋಪಿ ಅಲ್ಲಿಗೆ ಬಂದು ಸದರಿ ಸ್ಥಳ ಅವರದು ಮನೆ ಕಟ್ಟಬೇಡಿ ಎಂದು ಹೇಳಿದ್ದರು. ನಾವು ನಿಲ್ಲಿಸದೇ ಇದ್ದ ಕಾರಣ 1ನೇ ಆರೋಪಿ ಪೋಲೀಸರಿಗೆ ದೂರನ್ನು ನೀಡಿರುತ್ತಾರೆ. ಘಟನೆ ನಡೆದಿದೆ ಎನ್ನುವ ದಿವಸ ನಾವು ಠಾಣೆಯಲ್ಲಿ ಇದ್ದಾಗ 1ನೇ ಆರೋಪಿ ಮತ್ತು ಅವರ ಕಡೆಯವರೆಲ್ಲರು ಠಾಣೆಯಲ್ಲಿ ಇದ್ದರು. ಅವರು ನಿಲ್ಲಿಸಿ ಎಂದು ಹೇಳಿದರೂ ಸಹಾ ನಾವು ಮನೆ ಕಟ್ಟಿಸುವ ಕೆಲಸ ನಿಲ್ಲಿಸದಿದ್ದ ಕಾರಣ ಆರೋಪಿತರು ನಮ್ಮನ್ನು ಆ ಬಗ್ಗೆ ಕೇಳಿದ್ದು ಆ ಸಮಯ ನಾವೆಲ್ಲರು ಅವರಿಗೆ ದೊಣ್ಣೆ ಮತ್ತು ಇತರೆ ಆಯುಧಗಳಿಂದ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹಲ್ಲೆ ಮೂಡಿರುತ್ತಾರೆ ಎಂದು ಹೇಳಿ 1ನೇ ಆರೋಪಿ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ. 1ನೇ ಆರೋಪಿ ನಮ್ಮ ವಿರುದ್ಧ ದೂರು ನೀಡಿದ ಕಾರಣ ನಾವು ಅವರ ವಿರುದ್ಧ ದೂರು ನೀಡಿರುತ್ತೇವೆ ಎಂದರೆ ಸರಿ. 1ನೇ ಆರೋಪಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಅವರ ಮೇಲೆ ಹಲ್ಲೆ ಮಾಡಿ ಅವರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

**9.** ನಾವು ದೂರನ್ನು ನೀಡಲು ಠಾಣೆಗೆ ಹೋದಾಗ ಆರೋಪಿತರು ನಮ್ಮ ವಿರುದ್ಧ ದೂರು ದಾಖಲಿಸಿರುವ ವಿಷಯ ಗೊತ್ತಾಗಿರುತ್ತದೆ ಎಂದರೆ ಸರಿ. ಪೋಲೀಸರು ಸದರಿ ದೂರಿನ ಬಗ್ಗೆ ನಮ್ಮನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಆ ದಿನ ಪೋಲೀಸ್ ಠಾಣೆಗೆ ಹೋಗಿರುವುದು ಹೊರತಪಡಿಸಿ ಬೇರೆ ದಿನ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾನು ಪೋಲೀಸರ ಮುಂದೆಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**10.**

**11.**

**12.**

**13.** ನಮ್ಮ ಕುಟುಂಬದವರು ವಾಸವಿದ್ದ ಕೃತ್ಯ ಸ್ಥಳ ನಗರಸಭಾ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಕಂದಾಯವನ್ನು ಯಾರು ಕಟ್ಟುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿ ದಿನ ನಾನು ನನ್ನ ಗಂಡನಮನೆಯಿಂದನಾನು ನನ್ನ ತಂದೆ ತಾಯಿ ವಾಸವಿದ್ದ ಸದರಿ ಸ್ಥಳಕ್ಕೆ ಬಂದು ಹೋಗುತ್ತಿದ್ದೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳ ಹೊರತುಪಡಿಸಿ ಅಕ್ಕಪಕ್ಕದಲ್ಲಿ ನಮಗೆ ಯಾವುದೇ ಸ್ಥಳ ಇರುವುದಿಲ್ಲ. ಸದರಿ ಸ್ಥಳದ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಸ್ಥಳದ ಮಾಲೀಕರು ನಾವು ಎಂದು ತೋರಿಸಲು ಯಾವುದೇ ಕ್ರಯಪತ್ರವಾಗಲೀ ನಮೂನೆ – 3 ಅಥವಾ ನಮೂನೆ – 9 ಆಗಲೀ ನಮ್ಮ ಬಳಿ ಇರುವುದಿಲ್ಲ. ನನ್ನ ತಂದೆ ವಾಸವಿದ್ದರು ಎನ್ನುವ ಕೃತ್ಯ ಸ್ಥಳ ನಮ್ಮ ಕುಟುಂಬಕ್ಕೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದಿದೆ ಎನ್ನುವ ಸ್ಥಳದ ಜಾಗಕ್ಕೂ ನಮಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**14.** ನಮ್ಮ ಕುಟುಂಬದವರಿಗೆ ಯಾವುದೇ ವಾಸದ ಮನೆ ಇಲ್ಲದ ಕಾರಣ ಕೊಳಚೆ ನಿರ್ಮೂಲನ ಮಂಡಳಿಗೆ ನಮ್ಮ ತಂದೆ ಮನೆ ಕಟ್ಟಿಕೊಡಲು ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೊಳಚೆ ನಿರ್ಮೂಲನ ಮಂಡಳಿಯವರು ನಮ್ಮ ತಂದೆಯವರನ್ನು ಸರ್ಕಾರವೇ ಆಯ್ಕೆ ಮಾಡಿದ್ದರು. ನಮ್ಮ ತಂದೆಯ ಮನೆಯ ಅಕ್ಕಪಕ್ಕದ ಮನೆಯವರು ಸಹಾ ಅವರಿಗೆ ವಾಸದ ಮನೆ ಇಲ್ಲ ಎಂದು ಕೊಳಚೆ ನಿರ್ಮೂಲನ ಮಂಡಳಿಗೆ ಅರ್ಜಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ವಾಸವಾಗಿದ್ದರು ಎನ್ನಲಾದ ಸ್ಥಳದಲ್ಲಿ ಕೊಳಚೆ ನಿರ್ಮೂಲನ ಮಂಡಳಿಯವರು ಯಾವುದೇ ಮನೆಯನ್ನು ಕಟ್ಟಿಕೊಡಲಿಲ್ಲ. ಸದರಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳ ನಮ್ಮದು ಎಂದು ತೋರಿಸಲು ಕೊಳಚೆ ನಿರ್ಮೂಲನ ಮಂಡಳಿಗೆ ಯಾವುದೇ ದಾಖಲೆಯನ್ನು ನಾವು ನೀಡಿರುವುದಿಲ್ಲ. ಸದರಿ ಸ್ಥಳ ನಮಗೆ ಸೇರದೆ ಇದ್ದ ಕಾರಣ ಕೊಳಚೆ ನಿರ್ಮೂಲನ ಮಂಡಳಿಯವರು ನಮ್ಮ ತಂದೆಗೆ ಮನೆ ಕಟ್ಟಿಕೊಡಲು ನಿರಾಕರಿಸಿದರು ಎಂದರೆ ಸರಿ.

**15.** ನಮ್ಮ ತಂದೆ ವಾಸವಾಗಿದ್ದರು ಎನ್ನಲಾದ ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಮಾಲೀಕತ್ವದ ಎಲ್ಲಾ ದಾಖಲೆಗಳನ್ನು 1ನೇ ಆರೋಪಿ ಶಶಿಧರ ಎನ್ನುವವರ ಹೆಸರಿನಲ್ಲಿ ಇದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ ಎಂದರೆ ಸರಿಯಲ್ಲ. ಕೊಳಚೆ ನಿರ್ಮೂಲನ

ಮಂಡಳಿಯವರು ಮನೆ ಕಟ್ಟಿ ಕೊಡುತ್ತಾರೆ ಎಂದುತಿಳಿದುಕೊಂಡ ನಂತರ ನನ್ನ ತಂದೆ ಕೃತ್ಯ ನಡೆದಿದೆ ಎನ್ನುವ ಸ್ಥಳದಲ್ಲಿ ತಾತ್ಕಾಲಿಕವಾಗಿ ನೆಲೆಸಿದ್ದರು ಎಂದರೆ ಸರಿಯಲ್ಲ. ಈ ರೀತಿ ನನ್ನ ತಂದೆ ಅಲ್ಲಿ ನೆಲೆಸಿದ್ದ ಕಾರಣ ದಿಃ28.08.2019 ರಂದು 1ನೇ ಆರೋಪಿ ನಮ್ಮ ಕುಟುಂಬದವರ ವಿರುದ್ಧ ಮಂಡ್ಯ ಪಶ್ಚಿಮ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸರಿ. 1ನೇ ಆರೋಪಿ ತಾತ್ಕಾಲಿಕವಾಗಿ ನಮ್ಮ ಕುಟುಂಬದವರು ನೆಲೆಸಿದ್ದಾರೆ ಅವರನ್ನು ತೆರವುಗೊಳಿಸಿಕೊಡಿ ಎಂದು ಠಾಣೆಯಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ಕುಟುಂಬದವರು ಮತ್ತು 1ನೇ ಆರೋಪಿಯ ಮಧ್ಯೆ ಪೋಲೀಸರ ಸಮಕ್ಷಮದಲ್ಲಿ ಠಾಣೆಯಲ್ಲಿ ಸಂಧಾನದ ಮಾತುಕತೆ ನಡೆಯಿತು ಎಂದರೆ ಸರಿಯಲ್ಲ. ನಾನು ಪೋಲೀಸ್ ಠಾಣೆಗೆ ಹೋದಾಗ 1ನೇ ಆರೋಪಿ ಠಾಣೆಯಲ್ಲಿ ಇದ್ದರು ಎಂದರೆ ಸರಿಯಲ್ಲ. 1ನೇ ಆರೋಪಿ ನೀಡಿದ ದೂರಿನ ಬಗ್ಗೆ ನಾವು ಠಾಣೆಗೆ ಹೋದಾಗ ಪೋಲೀಸರು ಪ್ರಸ್ತಾಪ ಮಾಡಿದರು ಎಂದರೆ ಸರಿಯಲ್ಲ. ಪೋಲೀಸರು ಆ ದಿನ ನಮ್ಮನ್ನು ಠಾಣೆಗೆ ಕರೆಸಿದ್ದರು. ಆ ದಿನ ನಾವು ಪೋಲೀಸ್ ಠಾಣೆಯಲ್ಲಿ ಸುಮಾರು 15 ನಿಮಿಷ ಇದ್ದೆವು. ಈ ಅವಧಿಯಲ್ಲಿ ಪೋಲೀಸರು ಮತ್ತು ನಮ್ಮ ಕುಟುಂಬದವರು ಠಾಣೆಯಲ್ಲಿಯೇ ಇದ್ದೆವು. ಕೃತ್ಯ ನಡೆದಿದೆ ಎನ್ನುವ ಸ್ಥಳದಿಂದ ಪೋಲೀಸ್ ಠಾಣೆ ಅಂಜಾಜು ಒಂದುವರೆ 2 ಕಿಮಿ ದೂರ ಇದೆ. ಪೋನ್ ಮೂಾಲಕ ಕೃತ್ಯ ಸ್ಥಳದಲ್ಲಿ ಗಲಾಟೆ ನಡೆಯುತ್ತಿರುವ ವಿಷಯ ನಮಗೆ ತಿಳಿದಾಗ ಸದರಿ ವಿಷಯವನ್ನು ಪೋಲೀಸರಿಗೆ ಹೇಳಿ ಠಾಣೆಯಿಂದ ನಾವು ಮನೆಗೆ ಹೋದೆವು. ಆ ಸಮಯ ಪೋಲೀಸರು ನಮ್ಮ ಜೊತೆಗೆ ಸ್ಥಳಕ್ಕೆ ಬರಲಿಲ್ಲ. ಪೋಲೀಸರು ನಮಗೆ ಸದರಿ ಸ್ಥಳ ನಮ್ಮದಲ್ಲ ಅದನ್ನು ತೆರವುಗೊಳಿಸಿ ಕೊಡಿ ಎಂದು ನಮ್ಮಲ್ಲಿ ಹೇಳಿದರು ಎಂದರೆ ಸರಿಯಲ್ಲ. ಪೋಲೀಸ್ ಠಾಣೆಗೆ ಹೋದಾಗ ಕೃತ್ಯ ನಡೆದಿದೆ ಎನ್ನುವ ಸ್ಥಳ ನಮ್ಮದು ಎಂದು ತೋರಿಸಲು ಯಾವುದೇ ದಾಖಲೆಯನ್ನು ನಾವು ನೀಡಿರುವುದಿಲ್ಲ. ಸದರಿ ಜಾಗ 1ನೇ ಆರೋಪಿಗೆ ಸೇರಿದ್ದು ಎಂದು ತಿಳಿದಿದ್ದರೂ ಸಹಾ ಸದರಿ ಸ್ಥಳವನ್ನು ಲಪಟಾಯಿಸುವ ಉದ್ದೇಶದಿಂದ ಅಲ್ಲಿ ಅಕ್ರಮವಾಗಿ ನಾವು ನೆಲೆಸಿದ್ದೆವು ಎಂದರೆ ಸರಿಯಲ್ಲ.

**16.** ದಿಃ28.08.2019 ರಂದು ನ್ಯಾಯಾಲಯದ ಮುಂದಿರುವ ಆರೋಪಿತರೆಲ್ಲರೂ ಕೃತ್ಯ ಸ್ಥಳಕ್ಕೆ ಬಂದು ನಮಗೆ ಜಾತಿ ನಿಂದನೆ ಮಾಡಿ ಅವಾಚ್ಯಶಬ್ದದಿಂದ ಬೈದರು ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಈ ಸಂಬಂದ ನಾವು ಪೋಲೀಸ್

ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರುವುದಿಲ್ಲ. ದಿಃ30.08.2019 ರಂದು ನಾವು ಪೋಲೀಸ್ ಠಾಣೆಗೆ ಹೋದಾಗ ದಿಃ28.08.2019 ರಂದು ನಡೆದ ಘಟನೆಯ ಬಗ್ಗೆ ಪೋಲೀಸರಿಗೆ ಹೇಳಿರುತ್ತೇವೆ. ಆ ಸಂಬಂದ ಆ ಸಮಯ ಯಾವುದೇ ದೂರನ್ನು ನೀಡಿರುವುದಿಲ್ಲ. ದಿಃ28.08.2019 ರಂದು ಆರೋಪಿತರು ಕೃತ್ಯ ನಡೆದಿದೆ ಎನ್ನುವ ಸ್ಥಳಕ್ಕೆ ಬಂದಿರುವುದೂಇಲ್ಲ, ನಮಗೆ ಜಾತಿ ನಿಂದನೆ ಮಾಡಿರುವುದೂ ಇಲ್ಲ ಎಂದರೆ ಸರಿಯಲ್ಲ.

**17.** ದಿಃ30.08.2019 ರಂದು ನಾವು ಪೋಲೀಸ್ ಠಾಣೆಗೆ ಬರುವ ಪೂರ್ವದಲ್ಲಿ ಕೃತ್ಯ ನಡೆದಿದೆ ಎನ್ನುವ ಸ್ಥಳದಲ್ಲಿ ಯಾವುದೇ ಪೂರ್ಣಗೊಂಡಿದ್ದ ಕಟ್ಟಡ ಇರಲಿಲ್ಲ ಎಂದರೆ ಸರಿಯಲ್ಲ. ನಾವು ದಿಃ30.08.2019 ರಂದ ಠಾಣೆಗೆ ಹೋಗುವ ಪೂರ್ವದಲ್ಲಿ ಯಾವುದೇ ಕಟ್ಟಡವನ್ನು ನಾವು ನೆಲಸಮಗೊಳಿಸಿರಲಿಲ್ಲ ಎಂದರೆ ಸರಿಯಲ್ಲ.

**18.** ನಾವು ಪೋಲೀಸ್ ಠಾಣೆಯಿಂದ ಕೃತ್ಯ ಸ್ಥಳಕ್ಕೆ ವಾಪಸ್ಸು ಬಂದಾಗ ಸ್ಥಳದಲ್ಲಿ ಸುಮಾರು 50 ರಿಂದ 100 ಜನರು ಸೇರಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು 20 ರಿಂದ 30 ಜನರು ಇದ್ದರು. 1 ಮತ್ತು 2ನೇ ಆರೋಪಿತರನ್ನು ಹೊರತುಪಡಿಸಿ ಘಟನೆ ನಡೆದಿದೆ ಎನ್ನಲಾದ ಹಿಂದಿನ ದಿನಗಳಲ್ಲಿ ನಾನು ನೋಡಿರುತ್ತೇನೆ. ದಿಃ30.08.2019 ರ ಹಿಂದಿನ ದಿನಗಳಲ್ಲಿ ಆರೋಪಿತರು ನಮ್ಮ ಮನೆಗೆ ಬಂದು ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಹೋಗಿರುತ್ತಾರೆ ಎಂದು ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಠಾಣೆಗೆ ದೂರು ಕೊಡಲು ಹೋಗಿದ್ದರು ಅಷ್ಟರಲ್ಲಿ 1ನೇ ಆರೋಪಿ ನಮ್ಮ ವಿರುದ್ದ ದೂರನ್ನು ನೀಡಿದ್ದರು. ದಿಃ30.08.2019 ರಹಿಂದಿನ ದಿನಗಳಲ್ಲಿಯೇ 1ನೇ ಆರೋಪಿ ನಮ್ಮ ಕುಟುಂಬದವರ ವಿರುದ್ದ ದೂರು ನೀಡಿರುವ ಬಗ್ಗೆ ನಾವು ತಿಳಿದುಕೊಂಡಿದ್ದೆವು.

**19.** ಕೃತ್ಯ ನಡೆದಿದೆ ಎನ್ನುವ ಸ್ಥಳದ ಮಾಲೀಕತ್ವದ ಬಗ್ಗೆ ಮಂಡ್ಯದ ಪಿಸಿಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಒ.ಎಸ್.507/2019 ರಂತೆ ಸಿವಿಲ್ ವ್ಯಾಜ್ಯ ನಡೆಯುತ್ತಿರುವುದು ನನ್ನ ಗಮನದಲ್ಲಿ ಇದೆ. ಈಗಾಲೂ ಸಹಾ ಸದರಿ ವ್ಯಾಜ್ಯ ವಿಚಾರಣಾ ಹಂತದಲ್ಲಿ ಇದೆ.

**20.** "*ದಿಃ30.08.2019 ರಂದು, ಒಬ್ಬರು ಗುದ್ದಲಿ, ಒಬ್ಬರು ಆರೆ ಹಿಡಿದುಕೊಂಡಿದ್ದು, 4 – 5 ಜನ ಹಿಂದೆ ಇದ್ದ ಶೆಡ್ಡಿನ ಮೇಲೆ ಹತ್ತಿ ಶೀಟು ಕಿತ್ತು ಹಾಕುತ್ತಿದ್ದರು, ಗೋಡೆಯಲ್ಲಾ ಹೊಡೆದು ಹಾಕುತ್ತಿದ್ದರು, ನಮ್ಮನ್ನು ಒಳಗಡೆ ಬಿಡದೆ ಗೇಟನ್ನು ಬೀಗ*

*ಹಾಕಿಕೊಂಡಿದ್ದರು, 2 ಮತ್ತು 3ನೇ ಆರೋಪಿತರು ನನ್ನ ಕೈ ಹಿಡಿದು ನಾನು ಧರಿಸಿದ್ದ ಬಟ್ಟೆಯನ್ನು ಮುಂದೆ ಹಿಡಿದು ಎಳೆದು ಏ ಗುಡಸಟ್ಟಿ ಸೂಳೆ ಎಂದು ಬೈದರು, ಚಾಸಾ-2 ರವರು ಕಾಂಪೌಂಡು ಹಾರಿ ಒಳಗಡೆ ಹೊದರು, ಆಗ 1 ರಿಂದ 12ನೇ ಆರೋಪಿತರು ಎಲ್ಲರೂ ಸೇರಿ ಚಾಸಾ- 2 ರವರಿಗೆ ಹಲ್ಲೆ ಮಾಡಿದರು, ಚಾಸಾ- 5 ಒಳಗೆ ಹೋದಾಗ 2 ಮತ್ತು 3ನೇ ಆರೋಪಿತರು ಚಾಸಾ- 5 ರವರನ್ನು ಕೆಳಗೆ ತಳ್ಳಿ ಒಬ್ಬರು ಕಾಲಿನಲ್ಲಿ ಹೊಟ್ಟೆಗೆ ತುಳಿದರು ಮತ್ತೊಬ್ಬರು ಅವರ ಎರಡು ಕೈಯನ್ನು ನುಳಚಿದರು, ನಾನು ಒಳಗೆ ಹೋದೆ, ನನ್ನ ತಾಯಿ ಒಳಗೆ ಹೋದರು, ನನ್ನ ತಾಯಿಯ ಮೇಲೆ ಕಲ್ಲಿನಿಂದ ಹೊಡೆದರು, ಆರೆ ಹಿಡಿದುಕೊಂಡು ಸಾಯಿಸುತ್ತೇನೆಂದು ನನ್ನ ತಾಯಿಗೆ ಹೊಡೆದರು, ನನಗೆ ಸೀಮೆಂಟ್ ಕಲ್ಲಿನಿಂದ ಹೊಡೆದರು, ನನ್ನ ತಮ್ಮನಿಗೆ ರಿಪೀಸ್ ಪಟ್ಟಿ ಮತ್ತು ಸೀಮೆಂಟ್ ಕಲ್ಲುಗಳಿಂದ ಹೊಡೆದರು, ಆ ಸಮಯ ನಾವೆಲ್ಲಾ ಕಿರುಚಿಕೊಂಡೆವು, ಸುತ್ತ ಮುತ್ತ ಜನರು ತುಂಬಿಕೊಂಡರು, ಜನರು ಬಿಡಿಸಲು ಬಂದರು*" ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಪೋಲೀಸರಿಗೆ ಹೇಳಿಕೆ ನೀಡುವಾಗ ಈ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರಿಗೆ ನಾನು ಹೇಳಿಕೆ ನೀಡದಿದ್ದರೂ ಸಹಾ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**21.** ದಿಃ30.08.2019 ರಂದು ಪೋಲೀಸ್ ಠಾಣೆಗೆ ಹೋದಾಗ ನನ್ನ ಮೋಬೈಲ್ ಫೋನನ್ನು ಪೋಲೀಸರಿಗೆ ಕೊಟ್ಟಿದ್ದೆ. ಸದರಿ ಫೋನನ್ನು ಪೋಲೀಸರು ಆ ದಿನ ನನ್ನಿಂದ ವಶಪಡಿಸಿಕೊಂಡಿರುವುದಿಲ್ಲ. ಸದರಿ ಮೋಬೈಲ್ ಫೋನನ್ನು ಹಾಜರುಪಡಿಸಿ ಎಂದು ಪೋಲೀಸರು ನನಗೆ ನೋಟೀಸು ಕೊಡಲಿಲ್ಲ. ದಿಃ05.09.2019 ರಂದು ಪೋಲೀಸರು ನನ್ನ ಮೋಬೈಲ್ ಫೋನನ್ನು ವಶಪಡಿಸಿಕೊಂಡಿರುವುದಿಲ್ಲ. ಸದರಿ 5 ದಿನಗಳು ಸದರಿ ಫೋನ್ ನನ್ನ ಬಳಿಯೇ ಇತ್ತು. ನಿಪಿ–8 ಪೋಟೋಗಳನ್ನು ಹೊರತುಪಡಿಸಿ ಸದರಿ ಫೋನಿನಲಿ ಬೇರೆ ಪೋಟೋಗಳು ಇದ್ದವು. ಸದರಿ ಮೋಬೈಲ್ ಫೋನ್‌ನಲ್ಲಿ ಇದ್ದ ಪೋಟೋಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಾನು ಎಡಿಟ್ ಮಾಡಿ ಪ್ರಿಂಟ್ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೋಬೈಲ್ ಫೋನಿನಲ್ಲಿ ಇತ್ತು ಎನ್ನಲಾದ ವೀಡಿಯೋ ಮತ್ತು ಪೋಟೋಗಳನ್ನು ಪ್ರಿಂಟ್ ಮಾಡಿಸಿದಾಗ ಈ ಸಂಬಂದ ಬಿಲ್ಲನ್ನು ಪಡೆದುಕೊಂಡಿರುತ್ತೇನೆ. ಸದರಿ ಬಿಲ್ಲನ್ನು ಸಹಾ ನಾನು ಪೋಲೀಸರಿಗೆ ನೀಡಿರುತ್ತೇನೆ. ನಾನು ಕೃತ್ಯ ನಡೆದಿದ್ದೆ ಎನ್ನಲಾದ ಸಮಯದಲ್ಲಿ

ಸ್ಥಳದಲ್ಲಿ ಇರಲಿಲ್ಲ, ನಿಪಿ-8 ಪೋಟೋ ಮತ್ತು ನಿಪಿ-9 ರಲ್ಲಿ ಇರುವ ವಿಡೀಯೋಗಳನ್ನು ನಾನು ತೆಗೆದಿರುವುದಿಲ್ಲ, ಇವುಗಳನ್ನು ತೆಗೆದಿದೆ ಎನ್ನಲಾದ ಮೋಬೈಲ್ ಫೋನ್ ನನಗೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿಯಲ್ಲ.

**22.** ನಾವು ದೂರು ನೀಡಿರುವ ಅದೇ ದಿನ ನಮ್ಮ ಮೇಲೆ ಆರೋಪಿತರು ಮತ್ತೊಂದು ದೂರನ್ನು ನೀಡಿರುವುದು ನನ್ನಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. 1ನೇ ಆರೋಪಿ ದಿಃ30.08.2019 ರಂದು ನಮ್ಮ ವಿರುದ್ಧ ನೀಡಿದ ದೂರಿಗೆ ಸಂಬಂದಪಟ್ಟಂತೆ ಪೋಲೀಸರು ನಮ್ಮನ್ನು ವಿಚಾರಣೆ ಮಾಡಿರುವುದಿಲ್ಲ. ಸದರಿ ದೂರಿಗೆ ಸಂಬಂಪಟ್ಟಂತೆ ಇದೇ ನ್ಯಾಯಾಲಯದಲ್ಲಿ ನಾನು 4ನೇ ಆರೋಪಿಯಾಗಿ ಎಸ್.ಸಿ.52/2021 ವಿಚಾರಣಾ ಹಂತದಲ್ಲಿ ಇದೆ ಎಂದರೆ ಸರಿ. ದಿಃ30.08.2019 ರಿಂದ ಸದರಿ ಎಸ್.ಸಿ.52/2021 ರಲ್ಲಿ ಜಾಮೀನು ಪಡೆದುಕೊಂಡು ಠಾಣೆಗೆ ಹೋಗುವವರೆಗೆ ನಾನು ಪೋಲೀಸ್ ಠಾಣೆಗೆ ಹೋಗಿರುವುದೇ ಇಲ್ಲ. ದಿಃ30.08.2019 ರಿಂದ ಎಸ್.ಸಿ.52/2021 ಪ್ರಕರಣದಲ್ಲಿ ಜಾಮೀನು ಪಡೆದುಕೊಳ್ಳುವವರೆಗೂ ಕೃತ್ಯ ನಡೆದಿದೆ ಎನ್ನಲಾದ ಶೆಡ್ಡಿನಲ್ಲಿ ಇರುವ ಜಾಗದಲ್ಲಿ ವಾಸವಿದ್ದೆವು. ಆ ಮದ್ಯೆ ಪೋಲೀಸರು ಸದರಿ ಸ್ಥಳಕ್ಕೆ ಭೇಟಿ ನೀಡಿರುವುದೇ ಇಲ್ಲ. ದಿಃ30.08.2019 ರ ಎರಡು ತಿಂಗಳ ನಂತರ ಎಸ್.ಸಿ.52/2021 ರಲ್ಲಿ ಜಾಮೀನು ಪಡೆದುಕೊಂಡು ಠಾಣೆಗೆ ಹೋಗಿರುತ್ತೇವೆ. ಅಲ್ಲಿಯವರೆಗೂ ಪೋಲೀಸರು ನನ್ನನ್ನು ಭೇಟಿ ಮಾಡಿರುವುದಿಲ್ಲ, ನಾವು ಪೋಲೀಸರನ್ನು ಭೇಟಿ ಮಾಡಿರುವುದಿಲ್ಲ. ಸದರಿ ಎರಡು ತಿಂಗಳು ಅವಧಿಯಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿಯೇ ನಾವು ವಾಸವಿದ್ದೆವು. ನಮ್ಮ ಮೇಲೆ ಕೇಸು ದಾಖಲಾಗಿದೆ ಎಂದು ತಿಳಿದು ಬಂದ ನತಂರ ಸದರಿ ಸ್ಥಳದಿಂದ ನಾನು ಮತ್ತು ನಮ್ಮ ಕುಟುಂಬದವರು ಎಲ್ಲರು ತಲೆ ಮರೆಸಿಕೊಂಡಿದ್ದೆವು ಎಂದರೆ ಸರಿಯಲ್ಲ.

**23.** ದಿಃ05.09.2019 ರಂದು ನಾನು ಪೋಲೀಸ್ ಠಾಣೆಗೆ ಹೋಗಿರುವುದೂ ಇಲ್ಲ, ನಿಪಿ-8 ಪೋಟೋಗಳನ್ನು ಹಾಜರುಪಡಿಸಿರುವುದೂ ಇಲ್ಲ, ನಿಪಿ-9 ಡಿವಿಡಿಯನ್ನು ನೀಡಿರುವುದೂ ಇಲ್ಲ ಸ್ಥಳದಲ್ಲಿ ಪೋಲೀಸರು ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರು ಈ ಪ್ರಕರಣದ ಘಟನಾ ಸಂಬಂದ ವಿಚಾರಣೆ ಮಾಡಿರುವುದೂ ಇಲ್ಲ, ಯಾವುದೇ ಹೇಳಿಕೆ ಪಡೆದುಕೊಂಡಿರುವುದೂ ಇಲ್ಲ ಎಂದರೆ

ಸರಿಯಲ್ಲ. ಪೋಲೀಸರು ಹೇಳಿಕೊಟ್ಟಂತೆ ನ್ಯಾಯಾಧೀಶರ ಮುಂದೆ ನಿಪಿ–10 ಹೇಳಿಕೆಯನ್ನು ಸುಳ್ಳಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**24.** ದಿಃ30.08.2019 ರಂದು ನಡೆದಿದೆ ಎನ್ನಲಾದ ಘಟನೆಗೆ ಸಂಬಂದಪಟ್ಟಂತೆ ಆರೋಪಿತರು ಠಾಣೆಯಲ್ಲಿ ಇದ್ದಾರೆ ಎನ್ನುವ ವಿಚಾರವನ್ನು ಅದೇ ದಿನ ಪೋಲೀಸರು ನಮಗೆ ತಿಳಿಸಿರುತ್ತಾರೆ. 1 ರಿಂದ 12 ಆರೋಪಿತರನ್ನು ಪೋಲೀಸರು ನಮ್ಮ ಮನೆ ಬಳಿಯಿಂದ ಅದೇ ದಿನ ದಸ್ತಗಿರಿ ಮಾಡಿ ಠಾಣೆಗೆ ಕರೆದುಕೊಂಡು ಹೋದರು ಎನ್ನುವ ವಿಚಾರವನ್ನು ಪೋಲೀಸರ ಮುಂದೆ ಹೇಳಿಕೆ ನೀಡುವಾಗ ಅಥವಾ ನ್ಯಾಯಾದೀಶರ ಮುಂದೆ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೆ ಗುದ್ದಲಿ ಮತ್ತು ಮಚ್ಚನ್ನು ಆರೋಪಿತರು ಸ್ಥಳದಲ್ಲಿ ಬಿಟ್ಟು ಹೋದರು ಎನ್ನುವ ವಿಚಾರವನ್ನು ಪೋಲೀಸರ ಮುಂದೆ ಹೇಳಿಕೆ ನೀಡುವಾಗ ಅಥವಾ ನ್ಯಾಯಾದೀಶರ ಮುಂದೆ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ವಿಚಾರಗಳನ್ನು ಪೋಲೀಸರ ಮುಂದೆ ಅದವಾ ನ್ಯಾಯಾದೀಶರ ಮುಂದೆ ಹೇಳದಿದ್ದರೂ ಸಹಾ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲೆ 1ನೇ ಆರೋಪಿ ನೀಡಿರುವ ದೂರಿಗೆ ಪ್ರತಿ ದೂರಾಗಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂಒ–1 ರಿಂದ 4 ವಸ್ತುಗಳನ್ನು ಈ ಪ್ರಕರಣಕ್ಕೆಅನುಕೂಲವಾಗುವಂತೆ ನಮ್ಮ ಕುಟುಂಬದವರು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕುಟುಂಬದವರ ಮೇಲಾಗಾಲೀ ನನ್ನ ಮೇಲಾಗಲೀ ಯಾವುದೇ ರೀತಿಯಲ್ಲೇ ಮಡಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯ ಹೆಸರಿನಲ್ಲಿರುವ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**